ಡಾ.ಜಿ. ಪರಮೇಶ್ವರ

(ರೇಷ್ಮೆ ರಾಜ್ಯ ಸಚಿವರು)

ಬಂದಿದೆ.

ಸುಮಾರು ರೂ. 1,24,504-00 ಗಳು ಅವ್ಯವಹಾರಗಳು ನಡೆದಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿ : ನೌಕರರುಗಳ ವಿರುದ್ಧ ಸಿ.ಸಿ.ಎ. ನಿಯಮಾವಳಿಯ ನಿಯಮಗಳ ಅನುಸಾರವಾಗಿ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲಾಗುತ್ತಿದೆ. ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಿಷಯ : – ಹೊಳೆನರಸೀಪುರದಲ್ಲಿ ಗ್ರೈನೇಜ್ ಕಟ್ಟಡದ ನಿರ್ಮಾಣದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 159(81)

ಶ್ರೀ ಜಿ.ಪುಟ್ಟಸ್ವಾಮಿ ಗೌಡ(ಹೊಳೆನರಸೀಪುರ)

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಳೆನರಸೀಪುರದಲ್ಲಿ ರೇಷ್ಮೆ ಇಲಾಖೆಯಿಂದ ಗ್ರೈನೇಜ್ ಕಟ್ಟಡದ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭಿಸಲಾಯಿತು ಹಾಗೂ ಈ ಕಟ್ಟಡದ ಅಂದಾಜು ವೆಚ್ಚ ಎಷ್ಟು?

ಆ) ಈ ಕಟ್ಟಡದ ನಿರ್ಮಾಣಕ್ಕೆ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು?

ಇ) 1993-94ರಲ್ಲಿ ಎಷ್ಟು ಹಣವನ್ನು ಈ ಕಾಮಗಾರಿಗೆ ಬಿಡುಗಡೆ ಮಾಡಲಾಗುವುದು.

ಈ) ಈ ಕಟ್ಟಡದ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಡಾ. ಜಿ.ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು)

ಹೊಳೆನರಸೀಪುರದಲ್ಲಿ ರೇಷ್ಮೆ ಇಲಾಖೆ ಗ್ರೈನೇಜ್ ಕಟ್ಟಡ ನಿರ್ಮಾಣದ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಕಟ್ಟಡ ನಿರ್ಮಾಣದ ಅಂದಾಜು ವೆಚ್ಚ ಸುಮಾರು ರೂ.15.00 ಲಕ್ಷಗಳು.

ಉದ್ಭವಿಸುವುದಿಲ್ಲ.

ಆಡಳಿತಾತ್ಮಕ ಮಂಜೂರಾತಿಯಾದ ನಂತರ ಕಟ್ಟಡದ ಅಂದಾಜು ವೆಚ್ಚದ 1/3 ಭಾಗವನ್ನು ಬಿಡುಗಡೆ ಮಾಡಲಾಗುವುದು.

ಮಂಜೂರಾದ ನಂತರ ಶೀಘ್ರವಾಗಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ : – ಹೊಳೆನರಸೀಪುರದಲ್ಲಿ ಬೀಡಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ

ಪ್ರಶ್ನೆ ಸಂಖ್ಯೆ (ಚುಕ್ಕೆ ಗುರುತಿಲ್ಲದ) 160(82)

ಶ್ರೀ ಜಿ.ಪುಟ್ಟಸ್ವಾಮಿ ಗೌಡ(ಹೊಳೆನರಸಿಪುರ)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಳೆನರಸೀಪುರದಲ್ಲಿ ಬೀಡಿಕಾರ್ಮಿಕರಿಗೆ 500 ಮನೆಗಳನ್ನು ನಿರ್ಮಿಸಲು ಸರ್ಕಾರ ನಿರ್ಧರಿಸಿದೆಯೇ?

ಆ)ಹಾಗಿದ್ದಲ್ಲಿ, ಕರ್ನಾಟಕ ಗೃಹ ಮಂಡಳಿಯವರಿಗೆ ಭೂಸ್ವಾಧೀನ ಕ್ರಮವನ್ನು ಕೈಗೊಂಡು ಮನೆಗಳನ್ನು ನಿರ್ಮಿಸಲು ಆದೇಶ ನೀಡಲಾಗಿದೆಯೇ?

ಇ) ಇಲ್ಲಿಯವರಗೆ ಸರ್ಕಾರವು ಈ ಮನೆಗಳನ್ನು ನಿರ್ಮಿಸಲು ಎಷ್ಟು ಹಣ ಖರ್ಚು ಮಾಡಿದೆ?

ಈ) ಈ ನಿರ್ಮಾಣ ಕಾರ್ಯ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?